**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.**

S.C.No.37/2022

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ಸಂತೇಬೆನ್ನೂರು ಪೊಲೀಸ್ ಠಾಣೆ, ಸಂತೇಬೆನ್ನೂರು | | ಎ 1) ಸೈಯ್ಯದ್ ಅಬು ಸಲೇಹಾ ಯಾನೆ ಸೈಯ್ಯದ್ ಅಬ್ರಾಶ್ ಮತ್ತು ಇತರರು |

**ದೋಷಾರೋಪಣೆ**

ನಾನು ಶ್ರೀ. ಪ್ರವೀಣ್ ಕುಮಾರ್.ಆರ್.ಎನ್., ಬಿ.ಕಾಂ. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ ;-

ಆರೋಪಿತರಾದ - ಎ 1) ಸೈಯ್ಯದ್ ಅಬು ಸಲೇಹಾ ಯಾನೆ ಸೈಯ್ಯದ್ ಅಬ್ರಾಶ್ ತಂದೆ. ಸೈಯ್ಯದ್ ರಫೀಕ್, 22 ವರ್ಷ, ಕೂಲಿಕೆಲಸ,
ಎ 2) ಅಫ್ರೀನ್ ಖಾನಮ್ ಕೋಂ ಅಬು ಸಲೇಹಾ, 20 ವರ್ಷ, ಗೃಹಿಣಿ,
ಎ 3) ತೌಸಿಪ್ ಅಹಮ್ಮದ್ ತಂದೆ ಮೊಹಮ್ಮದ್ ಸನಾವುಲ್ಲಾ , 38 ವರ್ಷ, ಕೂಲಿಕೆಲಸ,
ಎಲ್ಲರೂ ವಾಸಃ ಕೆರೆಬಿಳಚಿ ಗ್ರಾಮ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ನಿಮ್ಮ ಮೇಲೆ ಈ ಕೆಳಕಂಡಂತೆ ಹೆಚ್ಚುವರಿ ಆರೋಪವಿಡುತ್ತೇನೆ.

1. ಮೊದಲನೇಯದಾಗಿ, ಚಾ.ಸಾ.1 ನೇಯವರು ಹುಟ್ಟಿಂದನಿಂದ ಮಧ್ಯಮ ಬೌದ್ಧಿಕ ಬೆಳವಣಿಗೆ ಇಲ್ಲದೇ ಅಂಗವೈಕಲ್ಯತೆಯಿಂದ ಬಳಲುತ್ತಿದ್ದು, ಅವಳಿಗೆ ಸರ್ಕಾರದಿಂದ 1,400-00 ರೂಪಾಯಿ ವೇತನ ಬರುತ್ತಿದ್ದು, ಅವಳು ಆಗಾಗ್ಗೆ 1 ಮತ್ತು 2 ನೇ ಆರೋಪಿತರಾದ ನಿಮ್ಮ ಮನೆಗೆ ಬರುತ್ತಿದ್ದು, ಆ ಸಮಯದಲ್ಲಿ ನಿಮ್ಮಲ್ಲಿ 2 ನೇ ಆರೋಪಿಗೆ ಕಾಲು ಚೈನು ಕೊಡಿಸುವಂತೆ ಅವಳು ರೂ.2 ಸಾವಿರ ಹಣವನ್ನು ನೀಡಿದ್ದು, ತದನಂತರ ಬೆಳ್ಳಿಯ ರೇಟು ಜಾಸ್ತಿಯಾಗಿದೆ ಎಂದು ನೀವು ರೂ.3 ಸಾವಿರ ಹಣವನ್ನು ಅವಳಿಂದ ಪಡೆದುಕೊಂಡಿದ್ದು, ತದನಂತರ ದಿಃ 06-08-2020 ರಂದು ಚಾ.ಸಾ.8 ರವರು ಪೋಸ್ಟ್ ಆಪೀಸಿಗೆ ಹೋಗಿ ವಾಪಾಸು ಬಂದು ಬೆಳಿಗ್ಗೆ 11-30 ಗಂಟೆಗೆ ತನ್ನ ಮನೆಯ ಕಿಟಕಿಯಲ್ಲಿ ನಿಂತುಕೊಂಡಿದ್ದಾಗ ನಿಮ್ಮಲ್ಲಿ 1 ನೇ ಆರೋಪಿಯಾದ ನೀನು ಕೈ ಸನ್ನೆ ಮಾಡಿ ಅವಳಿಗೆ ನಿಮ್ಮ ಮನೆಗೆ ಕರೆಯಿಸಿಕೊಂಡು ನಂತರ ಸಂಜೆ 4-00 ಗಂಟೆಗೆ ಚಾ.ಸಾ.13 ರವರ ಮಾರುತಿ ವ್ಯಾನ್ ನಂಬರ್ ಕೆಎ-35-ಎನ್-4412 ನ್ನು ಬಾಡಿಗೆಗಾಗಿ ಪಡೆದು ಅದರಲ್ಲಿ ಚಾ.ಸಾ.8 ರವರನ್ನು ಚೈನ್ ಕೊಡಿಸುತ್ತೇವೆ ಎಂದು ಹೇಳಿ ಅವಳನ್ನು ತಲೆಮರೆಸಿಕೊಂಡಿರುವ 3 ನೇ ಆರೋಪಿತನಿಗೆ ಅವಳ ಮನಸ್ಸಿಗೆ ವಿರುದ್ಧವಾಗಿ ಮದುವೆ ಮಾಡಿಸುವ ಉದ್ದೇಶದಿಂದ ಚಿತ್ರದುರ್ಗ ನಗರಕ್ಕೆ ಅಪಹರಿಸಿಕೊಂಡು ಹೋಗಿದ್ದು, ಅಲ್ಲಿಂದ

ತಲೆಮರೆಸಿಕೊಂಡಿರುವ 3 ನೇ ಆರೋಪಿ ತೌಸಿಫ್ ಅಹಮ್ಮದ್ ಎಂಬುವರಿಗೆ ಚಾ.ಸಾ.8 ನೇಯವರನ್ನು ಹಸ್ತಾಂತರ ಮಾಡಿದ್ದು, ಅವರು ಚಾ.ಸಾ.8 ನೇಯವರನ್ನು ಮಂಗಳೂರಿಗೆ ಅಪರಾಧ ಮಾಡುವ ಉದ್ದೇಶದಿಂದ ಕರೆದುಕೋಂಡು ಹೋಗಿ ಚಾ,ಸಾ.14 ರವರ ಮನೆಯಲ್ಲಿ ದಿಃ 09-08-2020 ರಂದು ಮದ್ಯಾಹ್ನ 2-00 ಗಂಟೆ ಸಮಯದಲ್ಲಿ ಬಲವಂತವಾಗಿ ಅತ್ಯಾಚಾರ ಮಾಡಿರುತ್ತಾನೆ. ಆರೋಪಿ 3 ನೇಯವರು ಬಲವಂತವಾಗಿ ಅತ್ಯಾಚಾರ ಮಾಡುವ ಉದ್ದೇಶವು ಆರೋಪಿತರಾದ ನಿಮಗೆ ತಿಳಿದಿದ್ದು, ಆ ಕಾರಣ ಚಾ.ಸಾ.8 ರವರನ್ನು ಮಾರುತಿ ವ್ಯಾನಿನ ಮುಖಾಂತರ ಅಪಹರಣ ಮಾಡಿದ್ದು, ಆ ಪ್ರಕಾರ ಭಾರತೀಯ ದಂಡ ಸಂಹಿತೆ ಕಲಂ.366, 376 ಸಹವಾಚನ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

2. ಇಂದು 05 ನೇ ತಾರೀಖು ಡಿಸೆಂಬರ್ ಮಾಹೆ 2022

**(ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ, ತಿಳಿಸಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಳ್ಳಲಾಯಿತು)**

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
**ದಾವಣಗೆರೆ.**

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.

S.C. No.37/2022

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ಸಂತೇಬೆನ್ನೂರು ಪೊಲೀಸ್ ಠಾಣೆ, ಸಂತೇಬೆನ್ನೂರು | | ಎ 1) ಸೈಯ್ಯದ್ ಅಬು ಸಲೇಹಾ ಯಾನೆ ಸೈಯ್ಯದ್ ಅಬ್ರಾಶ್ ಮತ್ತು ಇತರರು |

ಆರೋಪಿಯ ಹೇಳಿಕೆ

ಪ್ರಶ್ನೆ 1 – ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ -

ಪ್ರಶ್ನೆ 2 – ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ -

(ಆರೋಪಿ ಹೇಳಿಕೆಯನ್ನು ಆತನ ಹೇಳಿಕೆ ಮೇರೆಗೆ ಮತ್ತು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

ದಿನಾಂಕ. 05-12-2022